ವಿ-330-(43)

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರು ನಿಯಮ 330 ರಡಿ ಮಂಡಿಸಿರುವ ಸೂಚನೆಗೆ ಹೇಳಿಕೆ

**ವಿಷಯ:** 2002 ರ ಬ್ಯಾಚ್‌ನ ಡಿ.ಎಸ್.ಐ (ಡಿಟೆಕ್ಟೀವ್ ಸಬ್ ಇನ್ಸ್‌ಪೆಕ್ಟರ್) ರವರಿಗೆ 2020 ರಲ್ಲಿ ಸಿ ಅಂಡ್ ಆರ್ ರೂಲ್ಸ್ ಬದಲಾವಣೆ ಮಾಡಿ, ಬೇರೆ ಬೇರೆ ವಿಭಾಗಗಳಲ್ಲಿ ಕರ್ತವ್ಯ ನಿರ್ವಹಿಸಲು ಅವಕಾಶ ಮಾಡಿಕೊಟ್ಟಿರುವ ಅವೈಜ್ಞಾನಿಕ ಕ್ರಮದಿಂದಾಗಿ, ಸೇವಾ ಹಿರಿತನದ ಅಧಿಕಾರಿಗಳು, ತಮಗಿಂತ ವಯಸ್ಸಿನಲ್ಲಿ ಮತ್ತು ಸೇವೆಯಲ್ಲಿ ಕಿರಿಯರಾದ ಅಧಿಕಾರಿಗಳ ಕೈಕೆಳಗೆ ಕೆಲಸ ನಿರ್ವಹಿಸುವಂತಹ ಪರಿಸ್ಥಿತಿ ನಿರ್ಮಾಣವಾಗಿದ್ದು, ಇದರಿಂದಾಗಿ ತಾರತಮ್ಯವಾಗಿದ್ದು, ಸಾಮಾಜಿಕ ನ್ಯಾಯ ಪಾಲನೆಯಾಗದೆ ಇರುವ ಗಂಭೀರ ಸಮಸ್ಯೆ ಕುರಿತು ಸದನದಲ್ಲಿ ಮಾನ್ಯ ಗೃಹ ಸಚಿವರಲ್ಲಿ ಪ್ರಸ್ತಾಪಿಸಬಯಸುತ್ತೇನೆ.

## ಸರ್ಕಾರದ ಹೇಳಿಕೆ

ಸಿವಿಲ್ ಅಧಿಕಾರಿಗಳಿಗೆ ಸಂಬಂಧಪಟ್ಟಂತೆ ಮಂಜೂರಾತಿ ಬಲ ಮತ್ತು ವೃಂದ ಮತ್ತು ನೇಮಕಾತಿ ನಿಯಮ ಹಾಗೂ ಸಿಐಡಿ ಘಟಕಕ್ಕೆ ಸಂಬಂಧಿಸಿದಂತೆ ಮಂಜೂರಾತಿ ಬಲ ಮತ್ತು ವೃಂದ ಮತ್ತು ನೇಮಕಾತಿ ನಿಯಮಗಳು ಬೇರೆ ಬೇರೆ ಇರುತ್ತವೆ.

ಸರ್ಕಾರದ ಅಧಿಸೂಚನೆ ಸಂಖ್ಯೆ : ಡಿಪಿಎಆರ್ 67 ಎಸ್‌ಆರ್‌ಡಿ 94, ದಿನಾಂಕ: 1994 ರಲ್ಲಿ ಪ್ರಕಟಿಸಲಾದ ಸಿಐಡಿ ಘಟಕದ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಎಸ್‌ಪಿ (ಡಿಟೆಕ್ಟಿವ್) ವೃಂದದ 08 ಹುದ್ದೆಗಳ ಮಂಜೂರಾತಿ ಬಲವಿತ್ತು. ಕೇಂದ್ರ ಗೃಹ ಮಂತ್ರಾಲಯ, ನವದೆಹಲಿ ರವರ ಅಧಿಸೂಚನೆ ಸಂಖ್ಯೆ: 11052/08/2015-AIS-II(A), dtd: 29.12.2015 ರಲ್ಲಿ ಈ ಮೇಲ್ಕಂಡ 08 ಎಸ್‌ಪಿ (ಡಿಟೆಕ್ಟಿವ್) ಹುದ್ದೆಗಳ ಪೈಕಿ 03 ಹುದ್ದೆಗಳನ್ನು ಐಪಿಎಸ್ ಕೇಡರ್ ಹುದ್ದೆಗಳನ್ನಾಗಿ ಪರಿಗಣಿಸಿ ಆದೇಶ ಹೊರಡಿಸಲಾಗಿರುತ್ತದೆ. ಅದರಂತೆ, 05 ಹುದ್ದೆಗಳು ಲಭ್ಯವಿರುತ್ತದೆ.

ಈ ಹಿನ್ನೆಲೆಯಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಡಿ 185 ಮೊಸಿಅ 2018, ದಿನಾಂಕ: 07.09.2020 ರಲ್ಲಿ ಈ ಹಿಂದೆ ಸರ್ಕಾರದ ಅಧಿಸೂಚನೆ ಸಂಖ್ಯೆ : ಡಿಪಿಎಆರ್ 67 ಎಸ್‌ಆರ್‌ಡಿ 94, ದಿನಾಂಕ: 1994 ರಲ್ಲಿ ಪ್ರಕಟಿಸಲಾದ ಸಿಐಡಿ ಘಟಕದ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಡಿವೈಎಸ್‌ಪಿ (ಡಿಟೆಕ್ಟಿವ್) ವೃಂದದಿಂದ ಎಸ್‌ಪಿ (ಡಿಟೆಕ್ಟಿವ್) ವೃಂದದ ಮುಂಬಡ್ತಿಗೆ ಸಂಬಂಧಪಟ್ಟಂತೆ ನೇಮಕಾತಿ ವಿಧಾನವನ್ನು ಈ ಕೆಳಕಂಡಂತೆ ಮಾರ್ಪಡಿಸಿ ರಚಿಸಲಾಗಿರುತ್ತದೆ.

- 03 ಹುದ್ದೆಗಳು ಐಪಿಎಸ್ ಕೇಡರ್ ಹುದ್ದೆ
- 03 ಹುದ್ದೆಗಳು ಎಸ್‌ಪಿ (ಸಿವಿಲ್) (ನಾನ್ ಐಪಿಎಸ್) ರವರನ್ನು ನಿಯೋಜಿಸುವ ಮೂಲಕ
- 03 ಹುದ್ದೆಗಳು ಡಿವೈಎಸ್‌ಪಿ ಡಿಟೆಕ್ಟೀವ್ ಹುದ್ದೆಯಿಂದ ಎಸ್‌ಪಿ (ಡಿಟೆಕ್ಟೀವ್) ಮುಂಬಡ್ತಿ ಮೂಲಕ

ಈ ಮೇಲ್ಕಂಡಂತೆ ಹುದ್ದೆಗಳ ವರ್ಗೀಕರಣದ ನಿಮಿತ್ತ ಡಿಟೆಕ್ಟೀವ್ ವೃಂದದ ಡಿವೈಎಸ್‌ಪಿ ರವರುಗಳಿಗೆ ಎಸ್‌ಪಿ ಹುದ್ದೆಯ ಮುಂಬಡ್ತಿಗೆ ಅವಕಾಶ ಕಲ್ಪಿಸಲು 05 ಹುದ್ದೆಗಳನ್ನು ಕರ್ನಾಟಕ ಲೋಕಾಯುಕ್ತ, ಭ್ರಷ್ಟಾಚಾರ ನಿಗ್ರಹ ದಳ, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ಆಂತರಿಕ ಭದ್ರತಾ ವಿಭಾಗ ಮತ್ತು ಎಸ್‌ಐಟಿ ಇಲ್ಲಿ ನಿಯೋಜಿಸಲು ಅವಕಾಶ ನೀಡಲಾಗಿರುತ್ತದೆ.

ಎಸ್‌ಪಿ (ಡಿಟೆಕ್ಟೀವ್) ವೃಂದಕ್ಕೆ ಮಂಜೂರಾದ 05 ಹುದ್ದೆಗಳನ್ನು ಎಸ್‌ಪಿ (ಐಪಿಎಸ್) ಮತ್ತು ನಾನ್ (ಐಪಿಎಸ್) ರವರುಗಳಿಗಾಗಿ ಕಡಿಮೆ ಮಾಡಿರುವುದರಿಂದ ಈ 05 ಹುದ್ದೆಗಳನ್ನು ಇಲಾಖೆಯ ಇತರೆ ಘಟಕದಲ್ಲಿ ಸರಿದೂಗಿಸಲಾಗಿದೆ. ಈ ಮೇಲ್ಕಂಡ 05 ಹುದ್ದೆಗಳು ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಪಟ್ಟದಾಗಿರುವುದಿಲ್ಲ. ಇವುಗಳು ಪ್ರಕರಣಗಳ ತನಿಖೆಗೆ ಮಾತ್ರ ಸೀಮಿತವಾದ ಹುದ್ದೆಗಳಾಗಿರುತ್ತವೆ.

ಡಿಟೆಕ್ಟೀವ್ ವೃಂದದಲ್ಲಿ 1ನೇ ಬ್ಯಾಚ್ ಪಿಎಸ್‌ಐ ಆಗಿ 2002 ರಲ್ಲಿ ನೇಮಕಾತಿಗೊಂಡಿದ್ದು, ಸಿಐಡಿ ಘಟಕದ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಡಿಟೆಕ್ಟೀವ್ ಪಿಎಸ್‌ಐ ರವರು ರಿಕ್ತ ಸ್ಥಾನ ಲಭ್ಯವಾದಂತೆ ಮೇಲಿನ ಹುದ್ದೆಗೆ ಅರ್ಹತೆ ಮೇಲೆ ಪದೋನ್ನತಿ ಹೊಂದಿರುತ್ತಾರೆ.

ವೃಂದ ಮತ್ತು ನೇಮಕಾತಿ ನಿಯಮಕ್ಕೆ ತಿದ್ದುಪಡಿಯಂತೆ 05 ಘಟಕದಲ್ಲಿ 05 ಎಸ್‌ಪಿ ಹುದ್ದೆಗಳಿಗೆ ಮಾತ್ರ ಇವರುಗಳನ್ನು ನಿಯೋಜಿಸಲು ಅವಕಾಶ ಇರುತ್ತದೆ. ಉಳಿದಂತೆ ಬೇರೆ ಯಾವುದೇ ಘಟಕಕ್ಕೆ ಇವರ ನಿಯೋಜನೆ ಇರುವುದಿಲ್ಲ.

ಈ ಹಿಂದೆ ಜಾರಿಯಲ್ಲಿದ್ದ ಸಿಐಡಿ ಘಟಕದ ವೃಂದ ಮತ್ತು ನೇಮಕಾತಿ ನಿಯಮಗಳು 1994 ರಲ್ಲಿ ಎಸ್‌ಪಿ (ಡಿಟೆಕ್ಟೀವ್) ವೃಂದಕ್ಕೆ ಮಂಜೂರಾದ 08 ಹುದ್ದೆಗಳನ್ನು ಮೀರಿ ಇನ್ನಾವುದೇ ಡಿಟೆಕ್ಟೀವ್ ಎಸ್‌ಪಿ ಹುದ್ದೆಗಳನ್ನು ಹೆಚ್ಚಿಸಿರುವುದಿಲ್ಲ ಎಂದು ಸ್ಪಷ್ಟಪಡಿಸಿದೆ. ಹುದ್ದೆಗಳು ಕೇವಲ ಮರುಹಂಚಿಕೆಯಾಗಿರುತ್ತದೆ. ಹೀಗಾಗಿ ನಾನ್ ಐಪಿಎಸ್ ವೃಂದಕ್ಕೆ ಲಭ್ಯವಿರುವ ಹುದ್ದೆಗಳಲ್ಲಿ ಒಟ್ಟಾರೆಯಾಗಿ ಯಾವುದೇ ಹುದ್ದೆಗಳನ್ನು ಕಡಿತಗೊಳಿಸಿರುವುದಿಲ್ಲ.

(ಅರಗ ಜ್ಞಾನೇಂದ್ರ)
ಗೃಹ ಸಚಿವರು

ಸಂಖ್ಯೆ: ಒಇ 288 ಪಿಇಜಿ 2021